ಇ) ಧಾರವಾಡ ಜಿಲ್ಲೆಯ ಯಾವ ಯಾವ ತಾಲ್ಲೂಕಿನಲ್ಲಿ ಒಣ ಬೇಸಾಯ ಅಭಿವೃದ್ಧಿಯ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ?

ಈ) ರೋಣ ತಾಲ್ಲೂಕಿನಲ್ಲಿ ಎಷ್ಟು ಹೆಕ್ಟೇರು ಭೂಮಿಯಲ್ಲಿ ಇಲ್ಲಿಯವರೆಗೆ ಒಣ ಬೇಸಾಯ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗಿದೆ?

ಉ) ಸದರಿ ಅಭಿವೃದ್ಧಿ ಕಾರ್ಯಗಳಿಂದ ದೊರಕಿದ ಪ್ರತಿಫಲವೇನು?

ಶ್ರೀ ಕೆ.ಬಿ. ಮಲ್ಲಪ್ಪ (ನಿಯಂತ್ರಿತ ಮಾರುಕಟ್ಟೆ ಮಂತ್ರಿ ಖುಷ್ಕಿ ಜಮೀನು ಅಭಿವೃದ್ಧಿ ರಾಜ್ಯ ಸಚಿವರು).—

ಅ) ೧೯೮೭–೮೮ನೇ ಸಾಲಿನಲ್ಲಿ ರಾಜ್ಯದಲ್ಲಿ ಖುಷ್ಕಿ ಭೂ ಅಭಿವೃದ್ಧಿ ಕಾರ್ಯಕ್ರಮಗಳಿಗೆ ೨೧೭೪.೦೬೦ ಲಕ್ಷ ರೂಗಳನ್ನು ಪೆಚ್ಚು ಮಾಡಲು ಯೋಜಿಸಲಾಗಿದೆ. ಇದರ ಪೈಕಿ ೨೯೫.೨೫೨ ಲಕ್ಷ ರೂಪಾಯಿಗಳನ್ನು ವಿನಿಯೋಗಿಸಲಾಗಿದೆ.

ಆ) ಬದುಗಳ ನಿರ್ಮಾಣ, ಕೃಷಿ ಹೊಂಡ, ಕೊರಕಲು ತಡೆಗಟ್ಟು, ಅಟ್ಟಳಿಗೆ ಮಾದರಿಯ ಬದು, ತಿರುವು ಕಾಲುವೆ, ಸುಬಾಬುಲ್ ಗಿಡಗಳನ್ನು ನೆಡುವುದು ಜಮೀನನ್ನು ಸಮ–ಪಾತಳಿಯನ್ನಾಗಿ ಮಾಡುವುದು, ರೈತರಿಗೆ ಸುಧಾರಿತ ಕೃಷಿ ಉಪಕರಣಗಳ ಸರಬರಾಜು, ಕ್ಷಾರ ಮಂತ್ರ ಜೌಗು ಭೂಮಿಯನ್ನು ಕೃಷಿ ಯೋಗ್ಯವನ್ನಾಗಿ ಪರಿವರ್ತಿಸುವುದು. ನಾಲಾ ಬಂಡಿಂಗ್ ಈ ಕಾರ್ಯಗಳನ್ನು ಪ್ರದೇಶದ ವಂಳೆಯ ಪ್ರಮಾಣ, ಹವಾಗುಣ ಭೂಮಿಯ ಗುಣ ಮುಂತಾದುವುಗಳನ್ನು ಗಮನದಲ್ಲಿಟ್ಟುಕೊಂಡು ಭೂಸಾರ ಸಂರಕ್ಷಣಾ ಕಾರ್ಯಕ್ರಮವೆಂದನ್ವಯ ಕೈಗೊಳ್ಳಲಾಗುತ್ತಿದೆ.

ಇ) ಧಾರವಾಡ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಒಣ ಬೇಸಾಯ ಅಭಿವೃದ್ಧಿಯ ಕಾರ್ಯಗಳನ್ನು ತೆಗೆದುಕೊಳ್ಳಲಾಗಿದೆ.

ಈ) ರೋಣ ತಾಲ್ಲೂಕಿನಲ್ಲಿ ಒಣ ಬೇಸಾಯ ಅಭಿವೃದ್ಧಿ ಅಂಗವಾಗಿ ೫೦೬೦೫ ಹೆಕ್ಟೇರಿನ ಕ್ಷೇತ್ರದಲ್ಲಿ ಭೂಸಾರ ಸಂರಕ್ಷಣಾ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಉ) ಈ ಅಭಿವೃದ್ಧಿ ಕಾರ್ಯಕ್ರಮದಿಂದ ಮುಖ್ಯವಾಗಿ ಜಮೀನಿನ ಫಲವತ್ತಾದ ಮಣ್ಣು ಕೊಚ್ಚಿಕೊಂಡು ಹೋಗುವುದನ್ನು ತಡೆಯಲಾಗುತ್ತದೆ. ಇದರ ಜೊತೆಗೆ ಮಣ್ಣಿನ ತೇವಾಂಶವನ್ನು ಸಂರಕ್ಷಿಸಲಾಗುತ್ತದೆ. ಈ ಪ್ರದೇಶಗಳಲ್ಲಿ ಇದಲ್ಲದೇ ಇನ್ನಿತರ ಹಮ್ಮಿಕೊಂಡ ಕಾರ್ಯಕ್ರಮಗಳಿಂದ ಬೆಳೆ ಉತ್ಪಾದನೆಯು ಗಣನೀಯವಾಗಿ ಹೆಚ್ಚಾಗಿದೆ ಎಂದು ಕಂಡು ಬಂದಿದೆ.

ನವೋದಯ ಶಾಲೆಗಳನ್ನು ಸ್ಥಾಪಿಸುವ ಬಗ್ಗೆ

೧೮೭. ಶ್ರೀ ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ನವೋದಯ ಶಾಲೆಗಳನ್ನು ಯಾವ ಯಾವ ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ ?

ಆ) ಈ ಶಾಲೆಗಳನ್ನು ಸ್ಥಾಪಿಸಲು ಬೇಕಾದ ಪ್ರಾಥಮಿಕ ಸೌಲಭ್ಯಗಳೇನು ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

ಅ) ೧೯೮೬ನೇ ಸಾಲಿನಲ್ಲಿ.—

	ಜಿಲ್ಲೆ		ಸ್ಥಳ
೧	ಬೆಂಗಳೂರು	...	ದೊಡ್ಡ ಬಳ್ಳಾಪುರ ಓಟಿಸಿ ಕ್ಯಾಂಪಸ್
೨	ಕೋಲಾರ	...	ವಿನೆಗಡಲೆ ವಿದ್ಯಾಪೀಠ
೩	ಮಂಡ್ಯ	...	ಶಿವಾರಗುಡ್ಡ
೪	ಶಿವಮೊಗ್ಗ	...	ಗಾಜನೂರು ತುಂಗಾ ವಿದ್ಯಾಪೀಠ
೫	ಚಿಕ್ಕಮಗಳೂರು	...	ಬಾಳೆಹೊನ್ನೂರು
೬	ರಾಯಚೂರು	...	ಕುಕನೂರು.

೧೯೮೭–೮೮ನೇ ಸಾಲಿನಲ್ಲಿ. —

೧	ಉತ್ತರ ಕನ್ನಡ	...	ಶೆಟ್ಟಿಗೆರೆ
೨	ಹಾಸನ	...	ಮಾವಿನಕೆರೆ
೩	ಬೀದರ್	...	ತಿಪ್ಪಾನ್
೪	ಕೊಡಗು	...	ಗಾಳಿಬೀಡು
೫	ಗುಲ್ಬರ್ಗ	...	ಭೀಮರಾಯನ ಗುಡಿ
೬	ಧಾರವಾಡ	...	ಕೆಲಗೇರಿ
೭	ಬೆಳಗಾವಿ	...	ಕೊಥಲಿಕುಪ್ಪನವಾಡಿ
೮	ಬಿಜಾಪುರ	...	ಆಲಮಟ್ಟಿ ಅಣ್ಣೆಕಟ್ಟು
೯	ಬಳ್ಳಾರಿ	...	ಚಿಕ್ಕಜೋಗಿಹಳ್ಳಿ
೧೦	ಚಿತ್ರದುರ್ಗ	...	ಕರ್ತಾಲ್

ಆ) ಸಾಧಾರಣವಾಗಿ ೩೦ ಎಕರೆ ಭೂಮಿ ಹಾಗೂ ಕುಕ್ಕಳ/ಶಿಕ್ಷಕರುಗಳಿಗೆ ವಸತಿ ಸೌಲಭ್ಯ ಹಾಗೂ ಶಾಲೆಗೆ ಕಟ್ಟಡ ಇರಬೇಕು. ಇದರ ಜೊತೆಗೆ ನೀರು/ದೀಪದ ವ್ಯವಸ್ಥೆ ಮುಂತಾದ ಪ್ರಾಥಮಿಕ ಸೌಲಭ್ಯಗಳಿರಬೇಕು.

ಕೊಂಕಣ ರೈಲು ಮಾರ್ಗ ರಚನೆಯ ಬಗ್ಗೆ.

೧೬೮. ಶ್ರೀ ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ). —ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಂಬೈ–ಮಂಗಳೂರು ನಡುವಿನ ಕೊಂಕಣ ರೈಲ್ವೆ ಮಾರ್ಗ ರಚನೆಗಾಗಿ ಕೇಂದ್ರ ಸರ್ಕಾರ ಕೈಗೊಂಡಿರುವ ಕ್ರಮಗಳು ರಾಜ್ಯ ಸರ್ಕಾರದವರ ಗಮನಕ್ಕೆ ಬಂದಿವೆಯೆ ?

ಆ) ಮಂಗಳೂರು ಕಡೆಯಿಂದ ಈ ಮಾರ್ಗ ರಚನೆ ಪ್ರಾರಂಭಿಸಲು ರಾಜ್ಯ ಸರ್ಕಾರದವರು ಒತ್ತಾಯಿಸಿದ್ದಾರೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು).—

ಅ) ಬಂದಿದೆ.

ಆ) ಹೌದು.